ವಿಷಯ : ಹುಬ್ಬಳ್ಳಿ - ಧಾರವಾಡ ಮಹಾನಗರದ ರಸ್ತೆಗಳ ಸುಧಾರಣೆ ಹಾಗೂ ಅಭಿವೃದ್ಧಿ.

1426 (1903)-ಶ್ರೀ ಜಗದೀಶ ಶೆಟ್ಟರ್, (ಹುಬ್ಬಳ್ಳಿ) : ಮಾನ್ಯ ಪೌರಾಡಳಿತ ರಾಜ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದ ರಸ್ತೆಗಳ ಸುಧಾರಣೆ ಮತ್ತು ಇತರ ಅಭಿವೃದ್ಧಿ ಚಟುವಟಿಕೆಗಳ ಸಲುವಾಗಿ ಕಳೆದ ವರ್ಷ ಸರ್ಕಾರ ವಿಶೇಷ ಅನುಧಾನದ ರೂಪದಲ್ಲಿ ಒಂದೂವರೆ ಕೋಟಿರೂಪಾಯಿಗಳನ್ನು ಬಿಡುಗಡೆ ಮಾಡಿ ನಂತರ ಆಕ್ಟ್ರಾಯ್ ಪರಿಹಾರ ಧನ ಬಿಡುಗಡೆ ಮಾಡಿದ ಸಂದರ್ಭದಲ್ಲಿ ವಿಶೇಷ ಅನುದಾನದ 65 ಲಕ್ಷ ರೂಪಾಯಿಗಳನ್ನು ಮುರಿದುಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಮೀರಾಜುದ್ದೀನ್ ಪಟೇಲ್ (ಪೌರಾಡಳಿತ ರಾಜ್ಯ ಮಂತ್ರಿಗಳು.)

ಅ) ಹೌದು 1995-96ನೇ ಸಾಲಿನಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗೆ ರೂ.150 ಲಕ್ಷಗಳನ್ನು ಅಭಿವೃದ್ಧಿ ಅನುದಾನವಾಗಿ ನೀಡಿದ್ದು ಅದರಲ್ಲಿ ಸೇರ್ಪಡೆಯಾಗಿದ್ದು ಜಕಾತಿ ಅನುದಾನ ರೂಪದಲ್ಲಿ ಮಾತ್ರ ರೂ.85-00 ಲಕ್ಷಕಗಳನ್ನು ಮುರಿದುಕೊಳ್ಳಲಾಗಿದೆ.

ವಿಷಯ : ಹುಬ್ಬಳ್ಳಿಯ ಅಶೋಕನಗರ ರೈಲ್ವೆ ಅಂಡರ್ ಬ್ರಿಡ್ಜ್ ನಿರ್ಮಾಣಕ್ಕೆ ನಗರಾಭಿವೃದ್ಧಿ ಪಾಧಿಕಾರದಿಂದ ರೈಲ್ವೆ ಇಲಾಖೆಗೆ ತುಂಬಬೇಕಾದ ಹಣ.

1427 (1904)-ಶ್ರೀ ಜಗದೀಶ್ ಶೆಟ್ಟರ್, (ಹುಬ್ಬಳ್ಳಿ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿಯ ಅಶೋಕ ನಗರ ರೈಲ್ವೆ ಅಂಡರ್ ಬ್ರಿಡ್ಜ್ ನಿರ್ಮಾಣಕ್ಕೆ ಹುಬ್ಬಳ್ಳಿ-ಧಾರವಾಡ ಪ್ರಾಧಿಕಾರದಿಂದ ರೈಲ್ವೆ ಇಲಾಖೆಗೆ ತುಂಬಬೇಕಾದ ಹಣವನ್ನು ತುಂಬಲಾಗಿದೆಯೇ? ಹಾಗಿದ್ದಲ್ಲಿ ಯಾವಾಗ ಎಷ್ಟು ಹಣ ತುಂಬಲಾಗಿದೆ? ಈ ಬಡ್ಜ್‌ನ ಕಾಮಗಾರಿ ಕೆಲಸ ಎಂದು ಪ್ರಾರಂಭಿಸಲಾಗುವುದು (ವಿವರಗಳನ್ನು ಒದಗಿಸುವುದು)?

ಶ್ರೀ ಮೀರಾಜುದ್ದಿನ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು)

ಅ) ಹುಬ್ಬಳ್ಳಿ ವಿಭಾಗದ ಅಶೋಕ ನಗರದಲ್ಲಿ ರೈಲ್ವೆ ತಳ ಸೇತುವೆ ಕಟ್ಟಲು ಹಾಗೂ ಒಟ್ಟು ವೆಚ್ಚದ ಪೈಕಿ ಮಹಾನಗರ ಪಾಲಿಕೆಯ ವೆಚ್ಚ ರೂ. 60,11,50-00ಗಳು ಹಾಗೂ ಕೂಡು ರಸ್ತೆಗೆ ತಗಲುವ ವೆಚ್ಚ ರೂ. 29,75,000-00 ಹೀಗೆ ಒಟ್ಟು ರೂ.89,86,500-00ಗಳ

ಅಂದಾಜಿಗೆ ರಾಜ್ಯ ಸರಕಾರವು ಅಡಳಿತಾತ್ಮಕ ಮಂಜೂರಿ ನೀಡುತ್ತಾ ಈ ಬಗ್ಗೆ ರೈಲ್ವೆ ಇಲಾಖೆಗೆ ಒಟ್ಟು ಮೊತ್ತದ ಶೇ:80ರಷ್ಟು ರೂ.48,09,200-00ಗಳನ್ನು ಪಾವತಿಸಲು ಈಗಾಗಲೇ ಒಪ್ಪಿಗೆ ನೀಡಲಾಗಿದೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಆರ್ಥಿಕ ಪರಿಸ್ಥಿತಿಯನ್ನು ಅನುಗುಣವಾಗಿ ರೂ.20,00,000-00 ರೈಲ್ವೆ ಇಲಾಖೆಗೆ ಸಂದಾಯ ಮಾಡಲಾಗಿದೆ. ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ ರೂ.15.00 ಲಕ್ಷ ರೈಲ್ವೆ ಇಲಾಖೆಗೆ ತುಂಬಿ ಕೊಡಬೇಕಾದ ಹಣವನ್ನು ಕೂಡಲೇ ತುಂಬಲು ಸಹ ವಿನಂತಿಸಲಾಗಿದೆ. ರೈಲ್ವೆ ತಳ ಸೇತುವೆ ಕಟ್ಟುವ ಕಾಮಗಾರಿ ಪ್ರಾರಂಭಿಸಲು ರೈಲ್ವೆ ಇಲಾಖೆಗೆ ದಿ:22-3-97 ರಂದು ಕೋರಲಾಗಿದೆ.

ವಿಷಯ : ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ದುರ್ಬಲವಾಗಿರುವುದು.

1428 (1905)-ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ) : ಮಾನ್ಯ ಪೌರಾಡಳಿತ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ದುರ್ಬಲವಾಗಿರುವುದು ಸರ್ಕಾರದವರ ಗಮನಕ್ಕೆ ಸಂದಿದೆಯೇ? ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಆ) ಸ್ಥಳೀಯ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿ ಕುರಿತು ರಾಜ್ಯ ಹಣಕಾಸು ಆಯೋಗವು ನೀಡಿರುವ ವರದಿಯ ಸರ್ಕಾರಕ್ಕೆ ಬಂದಿದೆಯೆ? ಹಾಗಿದ್ದಲ್ಲಿ ವರದಿಯ ಅನುಸಾರ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಮೀರಾಜುದ್ದೀನ್ ಪಟೇಲ್ (ಪೌರಾಡಳಿತ ರಾಜ್ಯ ಮಂತ್ರಿಗಳು.)

ಅ) ಹೌದು

ಪೌರಸಂಸ್ಥೆಗಳಿಗೆ ಸರ್ಕಾರವು ಈ ಕೆಳಕಂಡ ಅನುದಾನವನ್ನು ನೀಡುತ್ತಿದೆ.

1) ಜಕಾತಿ
2) ಮೋಟಾರು ವಾಹನ ತೆರಿಗೆ
3) ಅಭಿವೃದ್ಧಿ ಅನುದಾನ
4) ರಾಜ್ಯ ಹಣಕಾಸು ಶಿಫಾರಿಸ್ಸಿನ ಅನುದಾನ
5) ಐಡಿಎಸ್ಎಂಟಿ.

ಆ) ರಾಜ್ಯ ಆರ್ಥಿಕ ಆಯೋಗದ ವರದಿ ಸರ್ಕಾರಕ್ಕೆ ಬಂದಿದೆ. ಆಯೋಗದ ವರದಿ ಪರಿಶೀಲನೆಯಲ್ಲಿದ್ದು ಶಿಫಾರಸ್ಸುಗಳನ್ನು ದಿನಾಂಕ: 1-4-97 ರಿಂದ ಜಾರಿಗೆ ತರಲಾಗುತ್ತಿದೆ.